# ಮಕ್ಕಳು ಓದು ಆಟ

**ಮಕ್ಕಳಲ್ಲಿ ಎಳವೆಯಲ್ಲೇ ಓದುವ ಅಭಿರುಚಿ ಬೆಳೆಸದಿದ್ದರೆ, ಅವರ ಸೃಜನಶೀಲ ಸಾಮರ್ಥ್ಯ ಕುಗ್ಗುವ ಸಾಧ್ಯತೆ ಇದೆ.**

■ ಡಾ.ಕೆ.ಎಸ್. ಚೈತ್ರಾ



ಆಟ ಎಂದರೆ ವಿಡಿಯೋ ಗೇಮ್ಸ್ ಅಲ್ಲ; ಇತರರೊಡನೆ ಕೂಡಿ ಆಡುವ ದೈಹಿಕ, ಮಾನಸಿಕ ಶ್ರಮ ಬೇಡುವ ಆಟಗಳು. ಓದು ಎಂದರೆ ಶಾಲಾ ಪುಸ್ತಕಗಳ ಓದಲ್ಲ. ಕತೆ ಪುಸ್ತಕಗಳು, ಯಾವ ಪರೀಕ್ಷೆಯೂ ಇಲ್ಲದೇ ಕೇವಲ ಆಸಕ್ತಿಯಿಂದ ನಡೆಯುವ ಪಠ್ಯೇತರ ಓದು. ಬಾಲ್ಯದ ಸವಿ ಹೆಚ್ಚಿಸಲು, ಮನಸ್ಸಿನ ಒತ್ತಡ ಕಡಿಮೆ ಮಾಡಲು, ಸಮಾನ ಆಸಕ್ತಿಯ ಸ್ನೇಹಿತರನ್ನು ಪಡೆಯಲು, ಸೃಜನಶೀಲತೆ ಬೆಳೆಸಲು, ಏಕಾಗ್ರತೆ ಹೆಚ್ಚಿಸಲು ಇದು ನೆರವಾಗುತ್ತದೆ. ಆದರೆ ಇಂದು ಮಕ್ಕಳು ಸೇರಿದಂತೆ ಹಲವರು ಓದುವ ಸುಖದಿಂದ ವಂಚಿತರಾಗುತ್ತಿದ್ದಾರೆಯೇ? ಪುಸ್ತಕ ಪ್ರಪಂಚಕ್ಕೆ ಅಪರಿಚಿತರಾಗುತ್ತಿದ್ದಾರೆಯೇ?

ಈ ಕುರಿತು ಹಲವಾರು ಸಂಶೋಧನೆ ಮತ್ತು ಅಧ್ಯಯನಗಳು ನಡೆದಿವೆ. ಅದರಿಂದ ಬಂದ ಅಂಕಿ, ಅಂಶಗಳು ಆತಂಕ ಮೂಡಿಸುವಂತಿವೆ. ಮಕ್ಕಳಲ್ಲಿ ಅದರಲ್ಲೂ ಹದಿಹರೆಯದವಲ್ಲಿ ಓದುವ ಅಭ್ಯಾಸ ದಿನೇ ದಿನೇ ಕಡಿಮೆಯಾಗುತ್ತಿದೆ. ಮುಖ್ಯ ಕಾರಣ; ಮೊಬೈಲ್, ಟಿವಿ, ಕಂಪ್ಯೂಟರ್ ಮತ್ತು ವಿಡಿಯೋ ಗೇಮ್ಸ್. ನಮ್ಮ ಜೀವನ ಸುಲಭವಾಗಿಸಲು ಕಂಡುಹಿಡಿದ ಈ ಯಂತ್ರಗಳು ಮನೆಯನ್ನಷ್ಟೇ ಅಲ್ಲ , ಜೀವನವನ್ನೇ ಆಕ್ರಮಿಸಿದೆ. ಅಂಗೈಯಲ್ಲಿ ಪ್ರಪಂಚ ತೋರಿಸುತ್ತಲೇ ಪಕ್ಕದಲ್ಲಿ ಇರುವವರನ್ನು ಅಪರಿಚಿತರನ್ನಾಗಿಸಿದೆ.

ಇದು ಯಂತ್ರಗಳ ದೋಷವಲ್ಲ; ಅದರ ಸರಿಯಾದ ಬಳಕೆಯಲ್ಲಿ ಆಗುತ್ತಿರುವ ತಪ್ಪು! ಪುಸ್ತಕ ಓದುವ ಅಭ್ಯಾಸ ಈಗಿನ ಮಕ್ಕಳಿಗಿಲ್ಲ ಎಂದು ದೂರುವ ಮೊದಲು ಪೋಷಕರು ತಮ್ಮ ಬದಲಾದ ಜೀವನ ಶೈಲಿಯತ್ತ ಗಮನ ಹರಿಸುವುದು ಮುಖ್ಯ. ಮಕ್ಕಳಿಗೆ ಓದಲು ಅಕ್ಷರ ಬರಬೇಕು ನಿಜ. ಹಾಗೆ ಓದುವ ಆಸಕ್ತಿ ಮೂಡಿಸುವ ಕೆಲಸ, ಕತೆ ಹೇಳುವುದರಿಂದ ಆರಂಭವಾಗಬೇಕು. ರಜೆಯಲ್ಲಿ ಅಜ್ಜನ ಮನೆಗೆ ಹೋದಾಗ ರಾತ್ರಿ ಮೊಮ್ಮಕ್ಕಳೆಲ್ಲಾ ಕತೆ ಕೇಳುತ್ತಾ ಹೂಂ ಗುಟ್ಟುತ್ತಾ ಹಾಗೇ ನಿದ್ದೆ ಹೋದದ್ದು ಅಮೂಲ್ಯ ನೆನಪು. ಹಾಗೆ ಕತೆ ಕೇಳಿ ಆಸಕ್ತಿ ಹುಟ್ಟಿ, ಮತ್ತಷ್ಟು ಓದುವ ಆಸೆಯಿಂದ, ಅಕ್ಷರ ಬೇಗ ಕಲಿತು ಕತೆ ಪುಸ್ತಕ ಹಿಡಿದಿದ್ದು ಸುಳ್ಳಲ್ಲ. ಇದು ನಾಲ್ಕೈದು ದಶಕಗಳ ಹಿಂದೆ ಮಕ್ಕಳೆಲ್ಲರ ಅನುಭವ.

ಆದರೀಗ ಆಗುತ್ತಿರುವುದೇನು? ಕತೆ ಹೇಳಲು ಅಮ್ಮ ಅಪ್ಪಗೆ ಪುರುಸೊತ್ತಿಲ್ಲ.



ವಿನ್ಯಾಸ: ದಿಲ್